ಆ) ಈ ಯೋಜನೆಯ ಕಾಮಗಾರಿಗಳನ್ನು ಮಾರ್ಚ್ 2004 ರಲ್ಲಿ ಪ್ರಾರಂಭಿಸಿ 2005ರ ಮಾರ್ಚ್ ತಿಂಗಳಿನಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ

ಇ) ರೂ 220 00 ಲಕ್ಷಗಳು
(ರೂ 150 00 ಲಕ್ಷ ನೀರು ಸರಬರಾಜಿಗೆ)
(ರೂ 70 00 ಲಕ್ಷ ರಸ್ತೆ ಮತ್ತು ಚರಂಡಿಗೆ)

ರಾಜ್ಯದಲ್ಲಿರುವ ಮುದ್ರಣ ಪ್ರಕಾಶಕರ ಬೇಡಿಕೆಗಳು

17 (76) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಮುದ್ರಣ ಪ್ರಕಾಶಕರು ಸರ್ಕಾರಕ್ಕೆ ಬೇಡಿಕೆಗಳನ್ನು ಸಲ್ಲಿಸಿರುವುದು ನಿಜವಲ್ಲವೇ

ಆ) ಹಾಗಿದ್ದಲ್ಲಿ ಆ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಾಬು ರಾವ್ ಚವ್ವಾಣ್ (ವಯಸ್ಕರ ಶಿಕ್ಷಣ, ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು)

ಅ) ನಿಜ

ಆ) ಸರ್ಕಾರದ ಮಟ್ಟದಲ್ಲಿ ಈಗಾಗಲೇ ಮುದ್ರಣ ಪ್ರಕಾಶಕರು, ಲೇಖಕರು ಲೇಖನ ಪ್ರಕಾಶಕರು ಇವರೊಂದಿಗೆ ಚರ್ಚಿಸಲಾಗಿದೆ ಇವರುಗಳ ಬೇಡಿಕೆಗಳ ಬಗ್ಗೆ ಸರ್ಕಾರವು ಪರಿಶೀಲಿಸುತ್ತಿದ್ದು, ಮುದ್ರಣ ಆಯ್ಕೆ ಮತ್ತು ಖರೀದಿ ನಿಯಮಗಳಲ್ಲಿ ಅಗತ್ಯವಿದ್ದಲ್ಲಿ ಸೂಕ್ತ ತಿದ್ದುಪಡಿ ತಂದು ಕ್ರಮ ವಹಿಸಲಾಗುವುದು

ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಗೈರು ಹಾಜರಿ

18 (513) ಶ್ರೀ ಸುಬ್ಬಾರೆಡ್ಡಿ ಕೆ ಎನ್ (ಬಸವನಗುಡಿ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸರ್ಕಾರಿ ಆರೋಗ್ಯ ಕೆಂದ್ರಗಳಲ್ಲಿ ಹಲವಾರು ದಿನಗಳಿಂದ ಗೈರುಹಾಜರಾದ ಸರ್ಕಾರಿ ವೈದ್ಯರುಗಳ ಸಂಖ್ಯೆ ಎಷ್ಟು

ಆ) ಈ ವೈದ್ಯರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) 146

ಆ) ವೈದ್ಯರುಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳು ಈ ಕೆಳಕಂಡಂತಿವೆ

1	ದೋಷಾರೋಪಣಾ ಪಟ್ಟಿ ಜಾರಿಯಾದ / ಜಾರಿಯಾಗಬೇಕಾದ ವಿಚಾರಣಾ ಪೂರ್ವ ಹಂತದ ಪ್ರಕರಣಗಳು	90
2	ವಿಚಾರಣಾ ವರದಿ ಸ್ವೀಕರಿಸಿದ್ದು ವರದಿಯ ಮೇಲೆ ಕ್ರಮ ಕೈಕೊಳ್ಳಲಾಗುತ್ತಿರುವ ಪ್ರಕರಣಗಳು	03
3	ವಾರ್ಷಿಕ ವೇತನ ಬಡ್ತಿ ತಡೆ ಹಿಡಿಯುವ ಇನ್ನಿತರೆ ಲಘು ದಂಡನೆ ವಿಧಿಸಿದ ಪ್ರಕರಣಗಳು	10
4	ಕಡ್ಡಾಯ ನಿವೃತ್ತಿ ಆದೇಶವಾದ ಪ್ರಕರಣಗಳು	01